ಅವರದ್ದೇ ಕೊನೆಯ ಮಾತು. ಮತ್ತ್ಯಾರೂ ಎದುರು ನುಡಿಯುವಂತೆ ಇರಲಿಲ್ಲ.

ಸ್ಯಾಮ್ ಮತ್ತು ತಾರಾ ಒಬ್ಬರನ್ನೊಬ್ಬರು ಮನಸಾರೆ ಮೆಚ್ಚಿದ್ದರು. ಅತ್ತ ಬೆಲಿಂಡಾ, ಇತ್ತ ಮಾಧವ್ ಮತ್ತು ಶೀಲಾ ಮದುವೆಗೆ ಅಸ್ತು ಎಂದರು. ಆದರೆ, ಹುಡುಗಿಯ ತಂದೆ ತಾಯಿ ಒಂದು ಬೇಡಿಕೆಯನ್ನು ಮುಂದಿಟ್ಟರು. ಅದೆಂದರೆ, ಮದುವೆ ಭಾರತೀಯ ಶೈಲಿಯಲ್ಲಿರಬೇಕು. ತಾರಾಳೊಡನೆ 'ಮಾನ್‌ಸೂನ್ ವೆಡ್ಡಿಂಗ್' ಚಿತ್ರವನ್ನು ನೋಡಿದ್ದ ಸ್ಯಾಮ್ ಒಮ್ಮೆಗೇ "ಆಗಲಿ" ಎಂದ. ಅವನಿಗೂ ಹೆಂಗಳೆಯರು, ರಂಗು ಮತ್ತು ಕುಣಿತ ಬೇಕಿತ್ತು.

ಮದುವೆಯ ಇ–ಆಹ್ವಾನ ಎರಡೂ ಕಡೆ ಜನರಿಗೆ ಹೋಯಿತು. ಸ್ಯಾಮ್ ಬಂದ ಉತ್ತರಗಳನ್ನು ಲೆಕ್ಕ ಹಾಕಿದ. ತನ್ನ ನೆಂಟರಾಗಿ ತಾಯಿ ಮತ್ತು ಅವಳ ತಮ್ಮ ಮತ್ತು ಅವರ ಮಕ್ಕಳು, ಒಟ್ಟು ಐದು ಜನ. ತನ್ನ ಜೊತೆ ಓದಿದವರು ಮತ್ತು ಕೆಲಸ ಮಾಡುವವರು ಇಪ್ಪತ್ತೈದು ಮಂದಿ. ತಾರಾಳ ಕಡೆ ವಿಚಾರಿಸಿದ. ಅವರ ದೂರದ ಅಥವಾ ಹತ್ತಿರದ ಸಂಬಂಧಿಗಳಾಗಿ ಆಸ್ಟ್ರೇಲಿಯಾದಲ್ಲಿರುವ ಐದು ಕುಟುಂಬಗಳು, ಅಮೆರಿಕದಿಂದ ಅವಳ ಅಣ್ಣನ ಕುಟುಂಬ (ಹೆಂಡತಿ ಮತ್ತು ಓರ್ವ ಮಗಳು), ಜೊತೆಗೆ ಸಂಬಂಧಿಗಳಾಗಿ ಆರು ಕುಟುಂಬದ ಹನ್ನೆರಡು ಮಂದಿ, ಭಾರತದಿಂದ ಹತ್ತಿರದ ಸಂಬಂಧಿಗಳು ನಾಲ್ಕು ಜನ, ಇನ್ನು ತಾರಾಳ ಜೊತೆ ಓದಿದ ಮತ್ತು ಅವಳ ಜೊತೆ ಕೆಲಸ ಮಾಡುವ ಹದಿನೈದು ಮಂದಿ. ಇವಲ್ಲದೆ ತಮಗೆ ಸಿಡ್ನಿಯಲ್ಲಿ ಪರಿಚಯವಿರುವ ಸುಮಾರು ಐವತ್ತು ಕುಟುಂಬಗಳಿಂದ ಮಕ್ಕಳೂ ಸೇರಿ ನೂರು ಮಂದಿ!

"ಹಾಗಾದರೆ, ಮದುವೆಗೆ ಇನ್ನೂರು ಮಂದಿ ಅತಿಥಿಗಳೇ?" ಹೌಹಾರಿದಳು ಬೆಲಿಂಡಾ. ಮಗ ಹೇಳಿದ, "ಹೌದು ಭಾರತೀಯರು ಹೀಗೆಯೇ. ಮದುವೆ ಅಥವಾ ಇನ್ನಾವುದೇ ಸಮಾರಂಭವೆಂದರೆ ಎಲ್ಲರೂ ಬರುತ್ತಾರೆ." ಕೂಡಲೇ ಮಗನಿಗೆ ಆದೇಶ ಇತ್ತಳು – ಮದುವೆಯ ಅರ್ಧ ವೆಚ್ಚವನ್ನು ನಾವು ವಹಿಸೋಣ. ನಾನು ಬೇಕಾದರೆ ಐವತ್ತು ಸಾವಿರ ಡಾಲರ್ ಕೊಡಲು ಸಿದ್ಧ ಎಂದಳು. ಸ್ಯಾಮ್ ಇದರ ಬಗ್ಗೆ ತನ್ನ ಭಾವಿ ಮಾವ ಮಾಧವ ಭಟ್ ಮತ್ತು ಅತ್ತೆ ಶೀಲಾ ಅವರೊಂದಿಗೆ ಮಾತನಾಡಿದ. ಅವರು ಒಮ್ಮೆಗೇ ಉತ್ತರ ಕೊಟ್ಟರು – "ನಾವು ಹೆಣ್ಣಿನ ತಂದೆ ತಾಯಿಯಾಗಿ ನಡೆಸಿಕೊಡಬೇಕಾದ ಮದುವೆ ಇದು. ನಮ್ಮ ಕರ್ತವ್ಯ. ನಮ್ಮಲ್ಲಿ ಹಣದ ಕೊರತೆ ಏನೇನೂ ಇಲ್ಲ. ನಿಮ್ಮ ಹಣ ನಿಮ್ಮಲ್ಲಿಯೇ ಇರಲಿ. ಮುಂದೆ ಸಂಸಾರ ಹೂಡುವಾಗ ಬಳಸಿಕೊಳ್ಳಿ." ಸ್ಯಾಮ್ ಮತ್ತು ಬೆಲಿಂಡಾ ಇಬ್ಬರಿಗೂ ಅಚ್ಚರಿಯಾಗಿತ್ತು ಈ ಉತ್ತರವನ್ನು ಕೇಳಿ. ಹೆಣ್ಣಿನ ಕಡೆಯವರು ಅದು ಅವರ ಹಕ್ಕು ಎನಿಸುವಂತೆ ವರ್ತಿಸಿದರು! "ನಮ್ಮ ಮದುವೆಗಳಲ್ಲಿ ಕರಾರು ಮಾಡಿಕೊಂಡು ಖರ್ಚನ್ನು ಹಂಚಿಕೊಳ್ಳುತ್ತೇವೆ!" ಎಂದೆನಿಸಿ ಪೂರ್ತಿ ಸಮಾಧಾನವಾಗಲಿಲ್ಲ ಗಂಡಿನ ಕಡೆಯವರಿಗೆ.

ಮದುವೆಗೆ ಮುಂಚೆ ನಾನಾ ಪಾರ್ಟಿಗಳಾದವು. ತಾರಾಳ ಸಂಬಂಧಿಗಳು ಮತ್ತು ಸ್ನೇಹಿತರು ಸ್ಯಾಮನನ್ನು ಮೆಚ್ಚಿದರು. ಕೆಲವರಂತೂ ಅವನು ಎಷ್ಟೋ ವರ್ಷಗಳಿಂದ ಬಲ್ಲ ಗೆಳೆಯ ಎಂಬಂತೆ ಬಹು ಆತ್ಮೀಯವಾಗಿ ಮಾತನಾಡಿಸುತ್ತಿದ್ದರು. ಮದುವೆಗೆಂದು ಅಮೆರಿಕದಿಂದ ಬಂದಿದ್ದ ತಾರಾಳ ಅಣ್ಣನ ಮಕ್ಕಳಂತೂ "ಅಂಕಲ್ ಸ್ಯಾಮ್" ಎಂದು ಇವನ ತೊಡೆಯನ್ನು ಏರುತ್ತಿದ್ದರು. ಎಲ್ಲಾ ಹೊಸದು ಸ್ಯಾಮನಿಗೆ. ನಿಜದಲ್ಲಿ ಅವನಿಗೆ ತಾರಾಳನ್ನು ಉಳಿದು ಮತ್ತ್ಯಾರೂ ಗೊತ್ತಿರಲಿಲ್ಲ. ಮಾರು ಹೊದ. "ಏನು ಬಂದಿದೆ ನನ್ನ ಜನಕ್ಕೆ? ತಾರಾಳ ಕುಟುಂಬವನ್ನು ನೋಡಿ ಕಲಿಯಬಾರದೇ? ಸಂಬಂಧ ಎಷ್ಟು ಚೆನ್ನಾಗಿ ಹೆಣೆದು ಕೊಂಡಿದೆ! ಎಷ್ಟು ಬೇಗ ಗೆಳೆಯರಾಗುತ್ತಾರೆ!" ಎನ್ನಿಸಿತು ಅವನಿಗೆ.

ಚಿಕ್ಕ ಪುಟ್ಟ ಆಚರಣೆಗಳನ್ನು ಬಿಟ್ಟರೆ ಒಂದು ದಿನದ ಮದುವೆ. ಹೇಳುವ ಅವಶ್ಯಕತೆಯೇ ಇಲ್ಲ. ತಮ್ಮ ನೆಚ್ಚಿನ ಮಗಳಿಗೆ ಬಿಳಿ ಅಳಿಯ. ಮದುವೆ ಯಕ್ಷಲೋಕವನ್ನೇ ನಿರಚಿಸಿತ್ತು. ಬೆಳಗ್ಗೆ ಭಾರತೀಯ ರೀತಿಯ ಧಾರೆ, ಮಾಂಗಲ್ಯ ಧಾರಣೆ ಮತ್ತು ಸಪ್ತಪದಿ. ಸಂಜೆ ಪಾಶ್ಚಿಮಾತ್ಯ ರಿಸೆಪ್ಷನ್.

ಬೆಳಗ್ಗೆ ಒಂದೊಂದು ಶಾಸ್ತ್ರಕ್ಕೂ ತನ್ನನ್ನು ವಿನಿಯೋಗಿಸಿಕೊಂಡು ಕುಳಿತ ಸ್ಯಾಮ್. ತಾಯಿ ಬೆಲಿಂಡಾ ಹತ್ತಿರ ಒಂದು ಕುರ್ಚಿಯ ಮೇಲೆ ಕುಳಿತಳು. ಬಂದಿದ್ದ ಪುರೋಹಿತರು ಇಂಗ್ಲಿಷ್ ಬಲ್ಲವರು, ಇಂತಹ ಸಾಕಷ್ಟು ಮದುವೆಗಳನ್ನು ಮಾಡಿಸಿದ್ದರು. ಒಂದೊಂದು ಹೆಜ್ಜೆಯಲ್ಲಿಯೂ ಇಂಗ್ಲಿಷಿನಲ್ಲಿ ವಿವರಣೆ